ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ / ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 75,
15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

ಸಂ. ಸ.ಇ./ವಾ-75/ಪಿ.ಆರ್./18/2021-22 ದಿನಾಂಕ: 13-01-2022

# ಸಭಾ ಸೂಚನಾ ಪತ್ರ

ವಿಷಯ:- ಶಂಕರಮಠ ವಾರ್ಡ್ ಸಂಖ್ಯೆ-75ರ ವಾರ್ಡ್ ಮಟ್ಟದ ಕುಂದು ಕೊರತೆಗಳನ್ನು ಚರ್ಚಿಸಲು ಸಭೆಯನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/2020-21 ದಿನಾಂಕ: 21.09.2020.

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಮಹಾಲಕ್ಷ್ಮೀಪುರ ವಿಭಾಗ, ನಾಗಪುರ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ 75 ಶಂಕರಮಠ ಪಾಲಿಕೆ ಸದಸ್ಯರ ಕಛೇರಿ, 15ನೇ ಮುಖ್ಯರಸ್ತೆ (ವಾಟರ್ ಟ್ಯಾಂಕ್ ರಸ್ತೆ), 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79 ರಲ್ಲಿ ದಿನಾಂಕ: 18.01.2022 ಮಂಗಳವಾರ ದಂದು ಬೆಳಗ್ಗೆ-10.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ವಾರ್ಡ್‌ಗೆ ಸಂಬಂಧಿಸುವ ಎಲ್ಲಾ ಇಲಾಖೆಯ ಅಧಿಕಾರಿಗಳು, ಸ್ಥಳೀಯ ನಾಗರೀಕಾ ಕಲ್ಯಾಣ ಸಂಘಗಳ ಪ್ರತಿನಿಧಿಗಳು ಹಾಗೂ ವಾರ್ಡ್‌ನ ನಾಗರೀಕರು ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.

**-: ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು :-**

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ವರದಿ ಮಾಡುವುದು.
2. ಕಳೆದ ಸಭೆಯಲ್ಲಿ ತಿಳಿಸಿದಂತೆ ಕೋವಿಡ್-19 ಗೆ ಸಂಬಂಧಿಸಿದಂತೆ ಪ್ರಸ್ತುತ ಸ್ಥಿತಿಯ ಸಂಬಂಧಿಸಿದ ಅಧಿಕಾರಿಗಳು ವರದಿ ಮಾಡುವುದು ಹಾಗೂ ವಿಶೇಷ ಕಾರ್ಯಕ್ರಮಗಳ ಪ್ರಗತಿಯ ಬಗ್ಗೆ ಚರ್ಚಿಸುವುದು.
3. ವಾರ್ಡ್‌ನಲ್ಲಿನ ಸ್ವಚ್ಛತೆ ಕಾಯ್ದುಕೊಳ್ಳುವುದು ಹಾಗೂ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.
4. ರಸ್ತೆಗುಂಡಿಗಳನ್ನು ಮುಚ್ಚುವುದು ಮತ್ತು ರಸ್ತೆ ಬದಿಯಲ್ಲಿ ಹಾಗೂ ಚರಂಡಿಗಳಲ್ಲಿನ ಡೆಬ್ರಿಸ್‌ಗಳನ್ನು ತೆರವುಗೊಳಿಸುವುದು.
5. ಬೀದಿ ದೀಪಗಳಿಗೆ ಸಂಬಂಧಿಸಿದ ದೂರುಗಳ ಬಗ್ಗೆ.
6. ವಾರ್ಡ್ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ.
7. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು ನೋಡಲ್ ಅಧಿಕಾರಿರವರ ಅದೇಶದ ಮೇರೆಗೆ )

13/1/2022

ಕಾರ್ಯದರ್ಶಿಗಳು ಹಾಗೂ ಸಂಚಾಲಕರು
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ:75

ಪ್ರತಿಯನ್ನು :

1. ಮಾನ್ಯ ಆಯುಕ್ತರು ರವರ ಅದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಕೌನ್ಸಿಲ್ ಕಾರ್ಯದರ್ಶಿ ರವರ ಅದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಲಯ ಉಸ್ತುವಾರಿ ವಿಶೇಷ ಆಯುಕ್ತರು, (ಪಶ್ಚಿಮ ವಲಯ) ರವರ ಅವಗಾಹನೆಗೆ ತರಲು ಆಪ್ತ ಸಹಾಯಕರಿಗೆ ಕಳುಹಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಪ) ರವರ ಅದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
6. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
7. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
8. ಕಾರ್ಯಪಾಲಕ ಅಭಿಯಂತರರು (ಮಲಪ್ರ) /(ವಿದ್ಯುತ್ ವಿಭಾಗ, ಪಶ್ಚಿಮ ವಲಯ) ವಿಭಾಗ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ನಾಗಪುರ ಉಪವಿಭಾಗ)/ (ಘನತ್ಯಾಜ್ಯ ನಿರ್ವಹಣೆ ವಿಭಾಗ) ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
10. ವೈದ್ಯಕೀಯ ಆರೋಗ್ಯಾಧಿಕಾರಿ (ಪಶ್ಚಿಮ)/ಹಿರಿಯ ಆರೋಗ್ಯ ಪರಿವೀಕ್ಷಕರು/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-75 ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
11. ಕಂದಾಯ ಅಧಿಕಾರಿಗಳು(ಮಹಾಲಕ್ಷ್ಮೀಪುರಂ)/ ಸಹಾಯಕ ಕಂದಾಯ ಅಧಿಕಾರಿ (ನಾಗಪುರ)/ ಕಂದಾಯ ಪರಿವೀಕ್ಷಕರು ವಾ-75 ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
12. ಠಾಣಾಧಿಕಾರಿಗಳು, ಬಸವೇಶ್ವರನಗರ ಹಾಗೂ ಮಹಾಲಕ್ಷ್ಮೀಪುರಂ ಪೋಲೀಸ್ ಠಾಣೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
13. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬಸವೇಶ್ವರನಗರ ಮತ್ತು ರಾಜಾಜಿನಗರ ಉಪವಿಭಾಗ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
14. ಬೆಸ್ಕಾಂ ಎನ್-3 ಮತ್ತು ಎನ್-7 ಉಪ ವಿಭಾಗ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
15. ಸಂಬಂಧಪಟ್ಟವರಿಗೆ.
16. ಕಛೇರಿ ಪ್ರತಿ.